ದಿನಾಂಕಃ 05.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ವಾದಿ ಪರ ಶ್ರೀ ಎಸ್.ವಿ.ಡಿ ವಕೀಲರಿಂದಃ**

ನಾನು ಪಿ.ಯು.ಸಿ ವರೆಗೆ ಓದಿರುತ್ತೇನೆ. ನನ್ನ ಜನ್ಮ ದಿ:28.08.1972 ಇರುತ್ತದೆ. ನನಗೆ 1 ರಿಂದ 3ನೇ ಪ್ರತಿವಾದಿಯರು ಓದಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಸರಕಾರಿ ಶಾಲೆಯಲ್ಲಿ ಓದಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದವರು ಜನತಾ ಕೋಲ್ಡ್ರಿಂಕ್ಸ್ ಹೌಸ್ ಅಂಗಡಿಯನ್ನು ನಡೆಸುತ್ತಿದ್ದರು ಎಂದರೆ ನಿಜ. ಸದರಿ ಅಂಗಡಿಯನ್ನು ಈಗ ಸುಮಾರು 10 ವರ್ಷಗಳ ಹಿಂದೆ ಬಂದ ಮಾಡಿರುತ್ತೇವೆ. ಅಲ್ಲದೇ ಡಿಲ್ಲಿ ರೆಡಿಮೆಡ್ ಸ್ಟೋರ್ಸ್ ಬಟ್ಟೆ ಅಂಗಡಿ ಕೂಡ ಇರುತ್ತದೆ ಎಂದರೆ ನಿಜ. ಸಾಕ್ಷಿಯು ಸದರಿ ಅಂಗಡಿಯನ್ನು ಈಗ ನಮ್ಮ ಸಹೋದರರಾದ ರಾಮಚಂದ್ರ ಮತ್ತು ಲಕ್ಷ್ಮಣ ಇವರ ಮಕ್ಕಳು ನಡೆಸುತ್ತಾರೆ ಎಂದು ನುಡಿಯುತ್ತಾರೆ.

ಅಕ್ಕಿಸಾಗರ ಗ್ರಾಮದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಯಾವುದೇ ಜಮೀನುಗಳು ಇರುವುದಿಲ್ಲ. ಗೋಕಾಕ ನಗರದಲ್ಲಿ ಸಿ.ಟಿ.ಎಸ್.ನಂ.3226 ನೇದ್ದು ನಮ್ಮ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ನಮ್ಮ ಸಹೋದರರಾದ 2 ಮತ್ತು 3ನೇ ಪ್ರತಿವಾದಿಯರು ನಮ್ಮ ತಂದೆಯ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಯಾವ ವರ್ಷದಲ್ಲಿ ಖರೀದಿಸಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ಸದರಿ ಆಸ್ತಿಯಲ್ಲಿ ಪ್ರಶಾಂತ ಲಾಡ್ಜ್ ನ್ನು 11ನೇ ಪ್ರತಿವಾದಿ ನಡೆಸುತ್ತಿದ್ದಾನೆ. ನಾವು ಎಲ್ಲಾ ಸಹೋದರರು ಈಹೊತ್ತಿಗೂ ಸಹ ಜಂಟಿ ಕುಟುಂಬದಲ್ಲಿ ವಾಸವಾಗಿದ್ದೇವೆ ಎಂದರೆ ಸಾಕ್ಷಿಯು 15 ವರ್ಷಗಳ ಹಿಂದೆ ಬೇರೆಯಾಗಿರುತ್ತೇವೆ ಎಂದು ನುಡಿಯುತ್ತಾರೆ. ನಾವು ಬೇರೆಯಾದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ.

ಡಿಲ್ಲಿ ಸೆಲೆಕ್ಷನ್ ಅಂಗಡಿಯನ್ನು ನಾನೇ ಪ್ರಾರಂಭಿಸಿರುತ್ತೇನೆ. ಸದರಿ ಅಂಗಡಿಯನ್ನು ನಾನು ಮತ್ತು 7ನೇ ಪ್ರತಿವಾದಿ ಪಾಲುದಾರಿಕೆಯಲ್ಲಿ ಪ್ರಾರಂಭಿಸಿದ್ದು, ನಂತರ 7ನೇ ಪ್ರತಿವಾದಿ ಸದರಿ ಅಂಗಡಿಯಲ್ಲಿ ಹಾಕಿದ ಬಂಡವಾಳನ್ನು ಪಡೆದು ಬೇರೆ ಅಂಗಡಿ ಪ್ರಾರಂಭಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಡಿಲ್ಲಿ ಸೆಲೆಕ್ಷನ್ ಪ್ರಾರಂಭಿಸಲು ನಾನು ಬಂಡವಾಳವನ್ನು ಸಾಲ ಮಾಡಿ ತಂದಿರುತ್ತೇನೆ. ಡಿಲ್ಲಿ ರೆಡಿಮೆಡ್ ಸ್ಟೋರ್ಸ್ ಬಟ್ಟೆ ಅಂಗಡಿಯಿಂದ ಬಂದ ಆದಾಯದಲ್ಲಿ ನಾನು ಡಿಲ್ಲಿ ಸೆಲೆಕ್ಷನ್ ಅಂಗಡಿಯನ್ನು ಪ್ರಾರಂಭಿಸಿರುತ್ತೇನೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬದಲ್ಲಿ ಬಹಳಷ್ಟು ಜನರು ಸದಸ್ಯರಿದ್ದ ಕಾರಣ ಆದಾಯ ತೆರಿಗೆ ಪಾವತಿ ಮಾಡಲು ತೊಂದರೆಯಾಗುತ್ತದೆ ಎಂದು ಎಲ್ಲಾ ಸದಸ್ಯರ ಹೆಸರಿಗೆ ಬೇರೆ ಬೇರೆ ಆಸ್ತಿಗಳನ್ನು ಜಂಟಿ ಕುಟುಂಬದ ಆದಾಯದಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ನಡೆಸುತ್ತಿದ್ದ ಎಲ್ಲಾ ಬಟ್ಟೆ ಅಂಗಡಿಗಳಿಗೂ ವಾದಿಯೇ ಬಾಂಬೆದಿಂದ ಬಟ್ಟೆ ಹಾಗೂ ಇತರೆ ಸಾಮಾನುಗಳನ್ನು ತಂದು ಪೂರೈಸುತ್ತಿದ್ದ ಎಂದರೆ ಸರಿಯಲ್ಲ. ನಮ್ಮ ಮಕ್ಕಳು ದೊಡ್ಡವರು ಆದ ನಂತರ ಈಗ ನಮ್ಮ ನಮ್ಮ ಅಂಗಡಿಗಳನ್ನು ನಾವು ನಡೆಸುತ್ತಿದ್ದು, ವಾದಿಗೂ ಸಹ ಒಂದು ಅಂಗಡಿಯನ್ನು ಹಾಕಿ ಕೊಟ್ಟಿದ್ದು, ಆದರೆ ಮುಂಚೆಯಿಂದ ವಾದಿಯೇ ಎಲ್ಲಾ ಅಂಗಡಿಗಳಿಗೆ ಬಟ್ಟೆ ಇತರೇ ಸಾಮಾನುಗಳನ್ನು ಪೂರೈಸುತ್ತಿದ್ದ ಎಂದರೆ ಸರಿಯಲ್ಲ.

ಈಗ ಸುಮಾರು 40 ವರ್ಷಗಳಿಂದ ನಾವು ನಮ್ಮ ನಮ್ಮ ಅಂಗಡಿಗಳಿಗೆ ನಾವೇ ಬಟ್ಟೆ ಹಾಗೂ ಇತರೇ ಸಾಮಾನುಗಳನ್ನು ಖರೀದಿಸುತ್ತಿದ್ದೇವೆ. ನಾನು 13-14 ವರ್ಷದವನಿದ್ದಾಗಿನಿಂದ ಅಂಗಡಿಗೆ ಬಟ್ಟೆ ಹಾಗೂ ಇತರೇ ಸಾಮಾನುಗಳನ್ನು ತಂದು ಹಾಕುತ್ತಿದ್ದೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು

ನಡೆಸುತ್ತಿದ್ದ ಅಂಗಡಿಗೂ ಸಹ ಜಂಟಿ ಕುಟುಂಬದ ಆದಾಯದಿಂದಲೇ ಸಾಮಾನುಗಳನ್ನು ಹಾಕುತ್ತಿದ್ದರು ಎಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ